(2) ನೋಂದಣಿ ಶುಲ್ಕದ ಕೆಲವು ಐಟಂಗಳನ್ನು ದಿನಾಂಕ :1-4-1997, 1-4-1998 ಮತ್ತು 1-4-1999 ರಂದು ಪುನರ್ ವಿಮರ್ಶಿಸಲಾಗಿದೆ.

(3) ಸರ್ಕಾರಿ ಪರಿಶೀಲನೆಯಲ್ಲಿದೆ.

(4) ಹೌದು.

ಬೆಂಗಳೂರು ನಗರದಲ್ಲಿ ಜನಪ್ರಿಯವಾಹಿನಿ ಬಸ್ ಸಂಚಾರ

500- ಶ್ರೀ ಕಟ್ಟ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಜನಪ್ರಿಯವಾಹಿನಿ ಬಸ್ ಸಂಚಾರವನ್ನು ಪ್ರಾರಂಭಿಸಲಾಗಿದೆಯೆ, ಹಾಗಿದ್ದಲ್ಲಿ, ನಿರ್ವಾಹಕ ರಹಿತ ಈ ಬಸ್ ಸಂಚಾರವನ್ನು ಯಾವ ಯಾವ ಬಸ್ ನಿಲ್ದಾಣಗಳಿಂದ ಪ್ರಾರಂಭಿಸಲಾಗಿದೆ?*

ಆ) *ಈ ಬಸ್ ಬೆಂಗಳೂರಿನಲ್ಲಿ ಜನಪ್ರಿಯವಾಗಿದೆಯೆ?*

ಇ) *ಈ ಬಸ್ಸುಗಳು ಸರಾಸರಿ ಲಾಭದಲ್ಲಿ ಸಂಚಾರಿಸುತ್ತಿದೆಯೇ?*

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು

ಸದ್ಯಕ್ಕೆ 5 ಜನಪ್ರಿಯ ವಾಹಿನಿ ಬಸ್ ಸಂಚಾರವನ್ನು ಪ್ರಾರಂಭಿಸಲಾಗಿದೆ. ವಿವರ ಕೆಳಕಂಡಂತಿದೆ.

1. ಕೆಂಪೇಗೌಡ ಬಸ್ ನಿಲ್ದಾಣ - ಜಯನಗರ ಬಸ್ ನಿಲ್ದಾಣ
2. ಕೆಂಪೇಗೌಡ ಬಸ್ ನಿಲ್ದಾಣ - ಜಯನಗರ 9ನೇ ಬ್ಲಾಕ್
3. ಶಿವಾಜಿನಗರ ಬಸ್ ನಿಲ್ದಾಣ - ಕೃಷ್ಣ ರಾಜೇಂದ್ರ ಮಾರುಕಟ್ಟೆ
4. ಕೃಷ್ಣರಾಜೇಂದ್ರ ಮಾರುಕಟ್ಟೆ - ಜಗಜೀವನರಾಂನಗರ
5. ಕೆಂಪೇಗೌಡ ಬಸ್ ನಿಲ್ದಾಣ - ಮಹಾಲಕ್ಷ್ಮೀ ಬಡಾವಣೆ.

ಆ) ಹೌದು.

ಇ) ಈ ಮೇಲ್ಕಂಡ 5 ಮಾರ್ಗಗಳ ಸರಾಸರಿ ಆದಾಯ ಪ್ರತಿ ಕೀಲೋಮೀಟರ್‌ಗೆ 13.36 ಇರುತ್ತದೆ. ಬೆಂಗಳೂರು ಮಾಹನಗರ ಸಾರಿಗೆ ಸಂಸ್ಥೆಯ, ಸರಾಸರಿ ಆಚರಣಾ ವೆಚ್ಚ ಪ್ರತಿ ಕೀಲೊಮೀಟರಿಗೆ ರೂ. 11.48 ಆದ್ದರಿಂದ ಪ್ರತಿ ಕೀಲೋಮೀಟರಿಗೆ ರೂ. 1.88 ಲಾಭಾಂಶ ಇರುತ್ತದೆ.